

ಪಾರ್ಕ್



ರಥೌಸ್

ಬವೇರಿಯನ್ನರ ಸಾಂಪ್ರದಾಯಿಕ ಉಡುಗೆ 'ಲೇಡರ್‌ಹೋಸೆನ್' ಎರಡನ್ನೂ ತಕ್ಕಡಿಯ ಸಮಭಾಗವಾಗಿ ಕಾಯ್ದುಕೊಳ್ಳುತ್ತಿದ್ದಾರೆ.

## ನಗರದ ವೈಶಿಷ್ಟ್ಯ

ಬವೇರಿಯಾದ ದೊರೆಗಳ ಕಾಲದಲ್ಲಿ ಕಿಂಗ್‌ಲುಡ್ವಿಗ್, ಮ್ಯಾಕ್ಸಿಮಿಲಿಯನ್ ತುಂಬ ಹೆಸರುವಾಸಿ ದೊರೆಗಳು. ಈ ಕಾಲದಲ್ಲಿ ಇಲ್ಲಿಯ ಗೊಥಿಕ್ ಆರ್ಟ್ ತನ್ನ ಉನ್ನತಿಯನ್ನು ಪಡೆಯಿತು. ಇದಕ್ಕೆ ಪುರಾವೆಯಾಗಿ  ಬವೇರಿಯಾ ತುಂಬ ಅರಮನೆಗಳು ತಲೆ ಎತ್ತಿದವು. ಇವುಗಳ ಜೊತೆಗೆ 500 ವರ್ಷಗಳ ಹಿಂದಿನ 'ರಾಥ್‌ಹೌಸ್'(ಟೌನ್‌ಹಾಲ್) ಮತ್ತು 'ಫ್ರಾವೆನ್‌ಕಿರ್ಶೆ' (ಅತಿದೊಡ್ಡ ಕೆಥೆಡ್ರಲ್) ಮ್ಯೂನಿಕ್‌ನ ಹೆಮ್ಮೆಯ ಪ್ರಾಚೀನ ಪ್ರತೀಕಗಳಾಗಿವೆ. ಜನನಿಬಿಡ ತಾಣಗಳೆನ್ನಿಸಿವೆ. ಇದು ಮ್ಯೂನಿಕ್ ನ ಹೃದಯಭಾಗ.

ಇಲ್ಲಿನ ಜೀವನಾಡಿ 'ಈಸಾರ್' ಮತ್ತು 'ವುರ್ಮ್' ನದಿಗಳು ಊರಿನ ತುಂಬ, ಊರಿನಾಚೆಗೂ ಅದೆಷ್ಟೋ ಮೈಲುಗಟ್ಟಲೆ ಹರಿಯುತ್ತ ಬವೇರಿಯಾದ ಬಹಳಷ್ಟು ಭೂಮಿಯನ್ನು ಫಲವತ್ತಾಗಿಸಿವೆ. ಇಲ್ಲಿ ಆಲ್ಪ್ಸ್ ಪರ್ವತಾವಳಿ ಆರಂಭವಾಗಿ ಮುಂದಕ್ಕೆ ಬೆಳೆಯುತ್ತಾ ಸಾಗಿರುವುದರಿಂದ, ಸುತ್ತಮುತ್ತಲ ಹಿಮಪರ್ವತ, ಹಸಿರಿನ ಇಳಿಜಾರುಗುಡ್ಡಗಳು, ಸೆಡಾರ್, ಪೈನ್‌ವೃಕ್ಷದ ಕಾಡುಗಳು ಮುಂತಾಗಿ ನಿಸರ್ಗಸಿರಿ ಕಾಲುಚಾಚಿ ಮಲಗಿದೆ. ಈ ಕಾರಣಕ್ಕೆ ಇಲ್ಲಿಯ ಚಳಿಗಾಲ ಸವಿದವರಿಗೇ ಗೊತ್ತು ಅದರ ತೀವ್ರತೆ.

